AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

# ಉಷಾನವರತ್ನರಾಮ್ ಅವರ ಅತಿಕ್ರಮಣ ಕಾದಂಬರಿಯಲ್ಲಿ ಮಹಿಳಾ ಶೋಷಣೆ.

**ಪುನೀತ್ ಕುಮಾರ್ ಹೆಚ್ ಆರ್**
ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ
ಫೀಲ್ಡ್ ಮಾರ್ಷಲ್ ಕೆ ಎಂ ಕಾರ್ಯಪ್ಪ ಕಾಲೇಜು
ಮಡಿಕೇರಿ, ಮಂಗಳೂರು ವಿಶ್ವವಿದ್ಯಾನಿಲಯ.

ಒಂದು ದೇಶದ ಅಥವಾ ಸಮಾಜದ ಮಹಿಳಾ ಅಸಮಾನತೆ ಅಲ್ಲಿನ ಕುಟುಂಬ ರಾಜಕಾರಣ ನೆಲೆಯಿಂದ ಉಗಮವಾಗತ್ತವೆ. ಮಹಿಳಾ ಅಸಮಾನತೆಯ ದೃಷ್ಟಿಕೋನ ಶೋಷಣೆಯ ಭಿನ್ನತೆಯನ್ನು ಆರಂಭಗೊಳಿಸುವುದನ್ನು ಗಮನಿಸಬಹುದು. ನ್ಯಾ ನಾಗಮೋಹನ್‌ದಾಸ್ ಅವರು ಮಹಿಳಾ ಅಸಮಾನತೆಗೆ ರಾಜಕೀಯ ನಿರ್ಬಲೀಕರಣ, ಅರ್ಥಿಕ ನಿರ್ಬಲೀಕರಣ, ಧಾರ್ಮಿಕ ಕಟ್ಟುಪಾಡುಗಳು, ಸಾಮಾಜಿಕ ಮಾಲ್ಯಗಳು ಮತ್ತು ಮೂಡನಂಬಿಕೆಗಳು ಎಂಬ ಐದು ಕಾರಣಗಳನ್ನು ತಿಳಿಸುತ್ತಾರೆ. ಮಹಿಳಾ ಸಮಾನತೆಯನ್ನು ನೈಜವಾಗಿ ಚಿತ್ರಿಸುವಲ್ಲಿ ಕನ್ನಡ ಕಾದಂಬರಿ ಪ್ರಮುಖ ಸಾಹಿತ್ಯ ಪ್ರಕಾರವಾಗಿವೆ. ಕನ್ನಡ ಮಹಿಳಾ ಕಾದಂಬರಿ ಆರಂಭಿಕ ಅವಧಿಯಲ್ಲಿ ತಿರುಮಾಲಂಭ. ಕಲ್ಯಾಣಮ್ಮ, ವೈದೇಹಿ, ಸಾರಾ ಅಬೂಬಕ್ಕರ್, ತ್ರಿವೇಣಿ ಮುಂತಾದವರ ಕಾದಂಬರಿಗಳು ಮಹಿಳಾ ಶೋಷಣೆಯನ್ನು ಅಮುಲಾಗ್ರವಾಗಿ ಚಿತ್ರಿಸಿವೆ. ಕನ್ನಡ ಕಾದಂಬರಿಗಳನ್ನು ಜನಪ್ರಿಯ ಎಂಬ ಭಿನ್ನತೆಯಿಂದ ಕೆಲವು ಕಾದಂಬರಿಕಾರ್ತಿಯರನ್ನು ಮತ್ತು ಅವರ ಕಾದಂಬರಿಗಳನ್ನು ನಿರ್ಲಕ್ಷಿಸಲಾಗಿದೆ. ಈ ವಿಧವಾಗಿ ಕಾದಂಬರಿಗಳನ್ನು ಭಿನ್ನ ನೆಲೆಯಲ್ಲಿ ನೋಡುವುದೇ ತಪ್ಪು ಎಂಬುದು ನನ್ನ ಅಭಿಪ್ರಾಯ. ಇತಂಹ ಕಾದಂಬರಿಕಾರ್ತಿಯರಲ್ಲಿ ಉಷನವರತ್ನರಾಮ್ ಪ್ರಮುಖರು ಕನ್ನಡ ಕಾದಂಬರಿ ಪ್ರಪಂಚದಲ್ಲಿ ಇವರನ್ನು ಕಾದಂಬರಿ ಕಣಜ ಎಂದೇ ಕರೆಯಲಾಗುತ್ತದೆ. "ಬಹುಕಾಲ ನೆನಪಿನಾಲದಲ್ಲಿ ಉಳಿದು ಬಿಡುವ ಪದೇ ಪದೇ ಓದಬೇಕೆನಿಸುವ ಅಂತಃಕರಣ ಕಲಕುವ, ವಿಶ್ವಾಂಬರದಷ್ಟೆ ವರ್ಣವೈವಿಧ್ಯತೆ, ಕಥೆ–ಕಥನ, ಪಾತ್ರ ಚಿತ್ರಣ, ಓರಣ, ಸಾಮಾಜಿಕ –ಸಮಕಾಲೀನ ಇತಿ ವೃತ್ತ – ವಿಷಯ ಚಿಂತನ – ಮಂಥನ. ಮಾನವ ಸಹಜ ತುಡಿತ ಸಂಬಂಧಗಳ ಒಳತೋಟಿ ತಂಬೆಲರಿನ ತಂಪು ಮೋಹನ ಮುರುಲಿಯ ಮೋಹಕತೆ, ಪಯಸ್ವಿನಿಯ ಮಧುರ ನಿನಾದ ಕಂಡಾಗ ಆಸ್ವಾದಿಸಿದಾಗ ಆಗುವ ಹರುಷ...."[1]. ಉಷಾ ಅವರದು ವಿಸ್ತೃತ ಅನುಭವ. ಬರವಣಿಗೆ ಸೃಜನಶೀಲ. ಇವರ ಬರಹಗಳಲ್ಲಿ ಪರಿಪಕ್ವ ಮನಸ್ಸನ್ನು ಕಾಣುತ್ತೇವೆ. ಯಾವ ಕಾದಂಬರಿಯನ್ನೇ ಓದಿದಾಗಲೂ ಓದುಗರಿಗಾಗುವ ಗಾಢ ಅನುಭವ ಕಾದಂಬರಿಯ ಪಾತ್ರಗಳು ನಿತ್ಯ ಜೀವನದಲ್ಲಿ ಕಣ್ಣೆದುರಿಗೆ ನೋಡುವಂಥವು. ಉಷಾನವರತ್ನರಾಮ್‌ರ ಕೆಲವು ಕಾದಂಬರಿಗಳು ಬೆಳ್ಳಿ ತೆರೆಯನ್ನು ಕಡಿರುವುದು ಕಾದಂಬರಿಗಳ ಜನಪ್ರಿಯತೆಗೂ ಅವುಗಳಲ್ಲಿನ ಕಥನ ಕಲೆಗೂ ಸಾಕ್ಷಿಯಾಗಿದೆ. ಸುಮಾರು ಅರವತ್ತಕ್ಕು ಹೆಚ್ಚು ಕಾದಂಬರಿಗಳನ್ನು ಬರೆದಿರುವ ಉಷಾನವರತ್ನರಾಮ್ ವಾಸ್ತವದ ನೆಲೆಯನ್ನು ತೀರ ಸರಳವಾದ ರೀತಿಯಲ್ಲಿ ವಿಶ್ಲೇಷಿಸುತ್ತಾರೆ.

1988ರಲ್ಲಿ ಪ್ರಕಟವಾದ ಅತಿಕ್ರಮಣ ಕಾದಂಬರಿ ಸಂಪ್ರದಾಯ ನಿಷ್ಟೆಯಲ್ಲಿ ಬೆಳೆದ ಹೆಣ್ಣು ಪಿತೃಪ್ರಧಾನ ವ್ಯವಸ್ಥೆಯ ಅಡಿಯಲ್ಲಿ ಅನುಭವಿಸುವ ಶೋಷಣೆಯನ್ನು ವಿವರಿಸುತ್ತದೆ. ಇಲ್ಲಿನ ಸುಜಾತ ತನ್ನ ಮನೆಯವರ ಒತ್ತಾಯಕ್ಕೆ ಮಣಿದು ಯಶವಂತ್‌ನನ್ನು ವಿವಾಹವಾಗುತ್ತಾಳೆ. ಮದುವೆ ಹೆಣ್ಣಿನ ಮನೋಇಚ್ಚೆಯಂತೆ ನಡೆಯದೆ ಸುಜಾತಳ ಬದುಕಿನಲ್ಲಿ ಸಂಚಲನವನ್ನುಂಟುಮಾಡುತ್ತದೆ. "ಕುಟುಂಬವೆನ್ನುವ ಸಂಸ್ಥೆಯು ಮೊದಲಿನಿಂದಲೂ ಒಂದು ಅಧಿಕಾರ ವ್ಯವಸ್ಥೆಯೇ ಆಗಿದೆ. ಅಲ್ಲದೇ ಸಮಾಜದಲ್ಲಿರುವ ಅಧಿಕಾರ ವ್ಯವಸ್ಥೆಗಳನ್ನು ಒಪ್ಪಿಕೊಳ್ಳುವಂತೆ ಮಾಡುವುದರಲ್ಲಿ ಹೀಗಾಗಿ ಮಹಿಳೆಯ ಎಲ್ಲಾ ಸಾಧ್ಯತೆಗಳು ಅದರ ಬಹು ಇಕ್ಕಟ್ಟಾದ ಇಂದಿನಲ್ಲಿ ಪೂರ್ಣಗೊಳ್ಳಲಾರವು"[2].

ಸುಜಾತಾಳಿಗೆ ತಾನು ಮದುವೆಯಾಗುವ ಹುಡುಗನೊಂದಿಗೆ ಕೆಲ ಸಮಯ ಕಳೆದು ಅವನನ್ನು ಅರ್ಥಮಾಡಿಕೊಳ್ಳುವ ಹಂಬಲಕ್ಕೆ ಅವಳ ತಂದೆ ಗೌರವದ ಹೆಸರಲ್ಲಿ ತಡೆಯಾಗುತ್ತಾನೆ. ಮದುವೆಯನ್ನು ದೈವಿಕ ಎಂದು ನಂಬಿರುವ ಸುಜಾತಳ ಮದುವೆಗೆ, ಹುಡುಗನ ಮನೆತನ ಒಳ್ಳೆಯದು ಎಂಬುದು ಮುಖ್ಯವಾಯಿತೇ ವಿನಃ ಹುಡುಗನ ಜೀವನದ ಸ್ವರೂಪ ಹೇಗಿದೆ ಎಂಬುದಲ್ಲ. ವಿದೇಶದಲ್ಲಿ ಕೆಲಸದಲ್ಲಿರುವ ಯಶವಂತ್ ವಿದೇಶಿ ಬದುಕು ಒಗ್ಗಿಹೋಗಿದ್ದವ. ಅಂತು ಅವಸರದಲ್ಲಿಯೇ ಸುಜಾತಳ ಸಂಸಾರಿಕ ಜೀವನಕ್ಕೆ ಪ್ರವೇಶಿಸುತ್ತಾಳೆ. "ಸಂಜೆಯಾಯಿತೆಂದರೆ ಮನೆಯ ತುಂಬ ಯಶವಂತನ ಸ್ನೇಹಿತರು ಬಂಧುಗಳ ಅವನನ್ನು ಮಾತನಾಡಿಸಿ ಹೋಗಲು ಬರುತ್ತಿದ್ದರು. ಬಂದವರಿಗೆ ಉಪಚಾರದ ನೆಪದಲ್ಲಿ ಹಾಟ್ ಡ್ರಿಂಕ್ಸ್ ಕೊಡುತ್ತಿದ್ದ ಯಶವಂತ ತಾನೂ ಸಾಕಷ್ಟು ಸೇವಿಸಿ ಆರೆಬರೆ ಜ್ಞಾನದಲ್ಲೇ ಊಟ ಮುಗಿಸಿ ಮಂಚದ ಮೇಲೆ ಬೀಳುತ್ತಿದ್ದ. ಮಬ್ಬು ಬೆಳಕಿನಲ್ಲಿ ಅಪ್ಸರೆಯಂತೆ ಕಾಣುತ್ತಿದ್ದ ಸುಜಾತಳನ್ನು ಅಪ್ಪಿ, ಆಲಂಗಿಸಿ ರಮಿಸುತ್ತಿದ್ದ. ಮೈ ಬೆಸೆದರೂ ಮನ ಬೆರೆಯದ ದಾಂಪತ್ಯ ಸುಜಾತಳಿಗೆ ಸಾಕು ಸಾಕಾಗಿಹೋಗಿತ್ತು"[3]. ಮದುವೆಯಾದ ನಾಲ್ಕು ದಿನಗಳ ನಂತರ ತನ್ನ ಕೆಲಸಕ್ಕೆ ಹಿಂದಿರುಗುತಾನೆ. ಸುಜಾತಳ ಶೋಷಣೆ ಕಾದಂಬರಿಯಲ್ಲಿ ಆರಂಭವಾಗುವುದು ಆತುರದ ಮದುವೆಯಿಂದ. ಸಾಮಾಜಿಕವಾಗಿಯೂ ಇದು ಸತ್ಯ ಎನಿಸಿತ್ತದೆ.

ಮೈ ಬೆಸೆದರೂ ಮನ ಬೆರೆಯದ ಸಂಬಂಧ ಎನ್ನುವಲ್ಲಿಯೇ ಹೆಣ್ಣನ್ನು ಪುರುಷ ಪ್ರಭುತ್ವ ಕೇವಲ ಬಯಕೆ ಇಡೇರಿಕೆಗೆ ಸೀಮಿತವಾಗಿಸಿರುವ ಲಕ್ಷಣವಿದೆ. ಮದುವೆಯಾದ ಹೆಣ್ಣು ತನ್ನ ಗಂಡ ವಿದೇಶದಲ್ಲಿದರೆ ಅವನಿಗಾಗಿ ಪತಿವ್ರತಾ ನೆಲೆಯಲ್ಲಿ ಕಾಯುತ್ತಲಿರಬೇಕು. ಅವಳ ಕಾಯುವಿಕೆಯನ್ನು ಸಮಾಜ ಮಡಿವಂತಿಕೆ ಕಣ್ಣಿನಿಂದ ನೊಡುತ್ತದೆ ವಿನಃ ಮಹಿಳಾ ಸಾಮಾನ್ಯ ಬಯಕೆಯ ಮನಸ್ಸಿಂದಲ್ಲ. ಮದುವೆಯಾಗಿ ನಾಲ್ಕು ವರ್ಷಗಳು ಕಳೆದರೂ ಸುಜಾತಳನ್ನು ವಿದೇಶಕ್ಕೆ ಕರೆಯಿಸಿಕೊಳ್ಳದ ಯಶವಂತನ ಪತ್ರವ್ಯವಹಾರದಲ್ಲಿನ ಪ್ರೀತಿ ಸುಜಾತಾಳಿಗೆ ಬರುಬರುತ್ತಾ ಅಸಡ್ಡೆಯಾಗುತ್ತದೆ. ಯಶವಂತನಿಂದ ಬಂದ ಪತ್ರಗಳನ್ನು ಓದುವಲ್ಲಿ ಮೊದಲಿದ್ದ ಉತ್ಸಾಹ ಕ್ರಮೇಣ ಕಡೆಮೆಯಗುತ್ತದೆ. ಗಂಡನಿಲ್ಲದ ಏಕಾಂತವನ್ನು ಕಳೆಯುವಲ್ಲಿ ಆಸಕ್ತಿಯಿಂದ ಶಿಕ್ಷಣವನ್ನು ಮುಂದುವರೆಸುವ ಸುಜಾತ ಅರ್ಥಶಾಸ್ತ್ರದಲ್ಲಿ ಪದವಿಗಳಿಸಿ ಉದ್ಯೋಗ ಪಡೆಯುತ್ತಾಳೆ. ಮಹಿಳೆ ಸ್ವಾವಲಂಬಿ ಬದುಕಿಗೆ ಶಿಕ್ಷಣದ ಅಗತ್ಯ ಮುಖ್ಯಪಾತ್ರವಾಗುವುದನ್ನ ಕಾದಂಬರಿಕಾರ್ತಿ ಇಲ್ಲಿ ತಿಳಿಸಿದ್ದಾರೆ. ಮಹಿಳೆ ತನ್ನ ಇಚ್ಚೆಗೆ ತಕ್ಕಂತೆ ಬದುಕನ್ನ ಕಟ್ಟಿಕೊಳ್ಳಲು ಆರ್ಥಿಕವಾಗಿ ಸದೃಡವಾಗುವುದು ಅನಿವಾರ್ಯವಾಗಿದೆ. ಹಾಗೇ ನೋಡಿದರೆ ಸುಜಾತಾಳ ಸಂಪೂರ್ಣ ಜೀವನ ಬದಲಾಗುವುದು ಅವಳು ತನ್ನ ದುಡಿಮೆಯನ್ನು ಆರಂಭಿಸಿದ ನಂತರ. ಗಂಡನೊಂದಿಗೆ ಕೇವಲ ನಾಲು ದಿನದ ಸಂಸಾರಿಕ ಬದುಕಿನ ರುಚಿ ಸವಿದ ಸುಜಾತಳಿಗೆ ತಾಯಿಯ ಮನೆಯಲ್ಲಿ ಒಂದಷ್ಟು ದಿನ, ಗಂಡನ ಮನೆಯಲ್ಲಿ ಒಂದಷ್ಟು ದಿನ ಕಳೆಯುತ್ತ ವೃತ್ತಿ ಜೀವನ ನಡೆಸಬೇಕಾಗುತ್ತದೆ. ಮದುವೆಯಾದ ನಂತರ ಪ್ರತಿಯೊಂದು ಹೆಣ್ಣು ಸಹ ತನ್ನ ಗಂಡನೊಂದಿಗೆ ಬದುಕುವ ಆಸೆ, ಕನಸುಗಳ ಇರುವುದು

ಸಹಜ ಒಂದು ವೇಳೆ ಹಾಗೆ ಗಟಿಸದಿದ್ದರೆ ತನ್ನ ಮದುವೆಯೇ ವ್ಯರ್ಥವೆನ್ನುವ ಅನುಭವ ಹೆಣ್ಣನ್ನಾವರಿಸುತ್ತದೆ. ಈ ಪರಿಸ್ಥಿತಿಯ ಸುಜಾತಳಿಗೆ ಭವಿಷ್ಯವೊಂದು ದೊಡ್ಡ ಪ್ರಶ್ನೆಯಾಗಿ ಉಳಿಯುವುದು. ತಾನು ಮದುವೆಯಾಗಿ ಸಾಧಿಸಿದ್ದೇನು? ಯಶವಂತ ಹೊರಟುಹೋದ ಮೇಲೆ ತನ್ನ ಗತಿಯೇನು ಎಂದಾಗುತ್ತದೆ. "ಬರಿದಾದ ಜೋಡಿ ಮಂಚ ನಗುತ್ತಿತ್ತು. ಕನ್ನಡಿಯ ಮುಂದಿನ ಅವಳ ಅಲಂಕಾರ ಸಾಮಾಗ್ರಿಗಳೆಲ್ಲ ಅವಳನ್ನು ಹಂಗಿಸುವಂತಿತ್ತು. ನಾಲ್ಕು ದಿನದ ಬಹಕೆಯ ದಾಹಕ್ಕೆ ಒಳಗಾಗಿ ತಾನೇನೆಲ್ಲವನ್ನೂ ಕಳೆದುಕೊಂಡು ಬಿಟ್ಟೆನಲ್ಲ–ಕುಳಿತಲ್ಲೇ ಕುಸಿದು ಅತ್ತಳು"[4]. ಸುಜಾತ ತನ್ನ ಮನೋಅಭಿವ್ಯಕ್ತಿ ಮೋಸಗೊಳಿಸಿ ಬದುಕನ್ನ ನಡೆಸುವ ಅನಿವಾರ್ಯತೆಯನ್ನು ಮೀರುವುದು ಇದೇ ಕಾರಣದಿಂದ. ಸುಜಾತಳಿಗೆ ಬರೆದ ಪತ್ರದಲ್ಲಿ ಅವಳನ್ನು ಸ್ವತಂತ್ರಗೊಳಿಸುವುದಾಗಿ ಯಶವಂತ್ ಹೇಳುವುದರಲ್ಲಿ ಪ್ರಭುತ್ವದ ಶೋಷಣೆಯ ಬೇರುಗಳನ್ನು ಅರಿಯಬಹುದು. ಹೆಣ್ಣು ತನ್ನ ಜನನದಿಂದಲೇ ಸರ್ವಸ್ವತಂತ್ರಳು ಅವಳ ವಿರುದ್ಧ ಪ್ರಭುತ್ವ ಸೃಷ್ಟಿಸಿರುವ ಬಂಧನಗಳನ್ನು ಮೀರಲು ಒಂದು ಸಣ್ಣ ಕಿಡಿ ಅರಿವಿನ ಸಾಕಾಗುತ್ತದೆ.

ನಾಲ್ಕು ವರ್ಷದ ಸನ್ಯಾಸದ ನಂತರ ತನ್ನದಲ್ಲದ ತಪ್ಪಿಗೆ ಸಂಪ್ರದಾಯದ ಹೆಸರಲ್ಲಿ ಅನುಭವಿಸುವ ಶೋಷಣೆಯಿಂದ ಹೋರಬರುವ ನಿರ್ದಾರಕ್ಕೆ ಬರುತ್ತಾಳೆ. ಕಾನೂನಿನ ಮೂಲಕ ಬೇರೆಯಾಗುವ ಅವಳ ಅಲೋಚನೆಗೆ ಮನೆಯಿಂದ ವಿರೋಧ ಬಂದಾಗ. ತನ್ನದೇ ಸ್ವಂತ ಬದುಕನ್ನು ಆರಂಭಿಸುತ್ತಾಳೆ. ಗಂಡು ಮಾಡಿದರೂ ಸರಿ ಅನ್ನೋ ಈ ಸಮಾಜದಲ್ಲಿ ಹೆಣ್ಣು ಎಷ್ಟೇ ತಗ್ಗಿ ಬಗ್ಗಿ ನಡೆದರೂ ತಪ್ಪೆಲ್ಲ ಅವಳದೇ. ಹೀಗೇ ಹಾಯಾಗಿ ನಾನೇ ದುಡಿದುಕೊಂಡು ತನ್ನ ಪಾಡಿಗೆ ನಾನು ಇರುವುದರಲ್ಲಿ ಸಿಗುವ ಸುಖ ತನ್ನ ಗಂಡನ ಮನೆಯಲ್ಲಿ ಸಿಗಲಿಲ್ಲ. ಮಹಿಳಾ ದುಡಿಮೆಯಿಂದ ಸಿಗುವ ಆರ್ಥಿಕ ಸಬಲತೆ ಮಹಿಳೆಯನ್ನು ಪುರುಷರಷ್ಟೆ ಶಕ್ತವಾಗಿ ದುಡಿಯುವುದಕ್ಕೆ ಪೂರಕವಾಗುತ್ತವೆ. "ಸರ್ವೆ ಸಾಮಾನ್ಯವಾಗಿ ದುಡಿಮೆ ವ್ಯಾಖ್ಯಾನಗಳು ಏನೇ ಇರಲಿ ಮಹಿಳೆಯ ಸಂದರ್ಭದಲ್ಲಿ ಮಾತ್ರ ಅದನ್ನ ಉತ್ಪಾದಕತೆಯಿಂದ ಪ್ರತ್ಯೇಕಿಸಿ ಇಡಲಾಗುತ್ತದೆ. ಎನ್ನುವುದು ಬಹಳ ಮುಖ್ಯವಾದಂತಹ ಸಂಗತಿ"[5]. ಇದೇ ರೀತಿಯಾಗಿ ಸುಜಾತಳ ದುಡಿಮೆ ಸಾಮಾಜಿಕ ನೆಲೆಯಲ್ಲಿ ಮಹಿಳಾ ದುಡಿಮೆಯು ಅವಳ ಸ್ವಾವಲಂಬಿ ಜೀವನದ ಬದಲಾಗಿ ಭಿನ್ನ ನೆಲೆಯಲ್ಲಿಯೇ ವ್ಯಾಖ್ಯಾನಿಲ್ಪಡುತ್ತದೆ. ಈ ರೀತಿಯಾಗಿ ವ್ಯಾಖ್ಯಾನಿಸುವುದರ ಹಿಂದೆ ಸುಜಾತ ಗಂಡನನ್ನ ಬಿಟ್ಟವಳು ಎನ್ನುವ ಪುರುಷ ಪರವಾದ ವಿವರಣೆಗಳಿವೆ. ಆದರೆ ಒಂದು ಹೆಣ್ಣು ತನ್ನ ಆಸೆಗಳಿಗೆ ಭಿನ್ನವಾಗಿ ಬದುಕನ್ನ ಕಟ್ಟಿಕೊಳ್ಳುವಾಗ ಎದುರಿಸುವ ಸಮಸ್ಯೆಗಳು ಪ್ರಭುತ್ವದ ನೆಲೆಯಲ್ಲಿ ಗೌಣವಾಗುತ್ತಾ ಬಂದಿರುವುದು ಗಮನಿಸಬೇಕಾದ ಸಂಗತಿಯಾಗಿದೆ.

ಸುಜಾತಳ ಬದುಕಿನಲ್ಲಿ ಮತ್ತೊಂದು ಪರ್ವ ಆರಂಭವಾಗುವುದು ಯಶವಂತ್ ನಿಂದ ಸಂದೇಶವನ್ನು ತಂದಿದ್ದ ರಣಜಿತ್‌ನ ಗೆಳೆತನದ ನಂತರ. ರಣಜಿತ್‌ನ ಮಾನವತೆಗೆ ಒಲಿದ ಸುಜಾತಾ, ಅವನಿಂದ ಯಶವಂತ್‌ಗೆ ವಿದೇಶದಲ್ಲಿದ್ದ ಅಕ್ರಮ ಸಂಬಂಧದ ಬಗೆ ತಿಳಿದು ಬರುತ್ತದೆ. ಇದರಿಂದ ಮನನೋಯುವ ಸುಜಾತಾಳನ್ನು ರಣಜಿತ್ ಸಮಾದಾನಿಸುತ್ತಾಳೆ. ಸಭ್ಯತೆ ಮತ್ತು ಸ್ನೇಹದಿಂದ ಇಬ್ಬರು ಒಟ್ಟಾಗಿ ಊಟ ಉಪಚಾರಗಳಿಗೆ ಸುತ್ತಾಡುತ್ತಾರೆ. ತನ್ನ ಪ್ರೀತಿಯ ಮಡದಿಯನ್ನು ಕಳೆದುಕೊಂಡಿದ್ದ ರಣಜಿತ್‌ಗೆ ಯಶವಂತ್ ನಿಜವಾಗಿಯ ಎಂತ ದಡ್ಡ ಎನಿಸುತ್ತದೆ. ಸುಜಾತಳನ್ನ ಬಹಳ ಗೌರವದಿಂದ ನಡೆಯಿಸಿಕೊಳ್ಳುವ ರಣಜಿತ್ ಅವಳಿಗೆ ಒಳ್ಳೆಯ ಸ್ನೇಹಿತನಾಗುತ್ತಾನೆ. ಅವಳ ಆರೋಗ್ಯ ಹದಗೆಟ್ಟಾಗ ಅವಳ ಬಗೆ ಕಾಳಜಿ ವಹಿಸುವ ರಣಜಿತ್ ಮೇಲೆ ಸುಜಾತಾಳಿಗೆ ಒಂದು ನಂಬಿಕೆ ಮೂಡುತ್ತದೆ. ಗಂಡನಿಂದ ವರ್ಷಗಳವರೆಗೆ ದೂರದಲ್ಲಿದ್ದು ಸ್ವತಂತ್ರ ಜೀವನ ನಡೆಸುತ್ತಿದ್ದ ಅವಳಿಗೆ ರಣಜಿತ್ ನೀಡಿದ ಮುತ್ತು ಅವಳಲ್ಲಿ ಸಾಮಾನ್ಯ ಭಾವನೆಗಳನ್ನು ಮೂಡಿತ್ತದೆ. ಒಂದು ದಿನ ಊಟಕ್ಕೆಂದು ಸುಜಾತಳ ಮನೆಗೆ ಬರುವ ರಣಜಿತ್ ಅವಳೊಂದಿಗೆ ಸುಖಿಸುತಾನೆ. ಇದು ಇಬ್ಬರು ಒಪ್ಪಿ ಮಾಡಿದ ತಪ್ಪು ಎಂದು ಅವರಿಗೆ ಅರಿವಾಗುತ್ತದೆ. ಸುಜಾತಳನ್ನು ಯಶವಂತ್‌ನಂತೆ ಒಂಟಿ ಮಾಡದ ರಣಜಿತ್ ಅವಳನ್ನು ವಿವಾಹವಾಗಲು ಸಿದ್ಧನಿರುವೆ ಎಂದು ಪ್ರಕಟಿಸಿದಾಗ ಸುಜಾತಳಿಗೆ ಹೊಸ ಜೀವನ ರೂಪಗೊಳ್ಳುತ್ತದೆ. ರಣಜಿತ್ ಸುಜಾತಾ ಒಗ್ಗೂಡಿಕೆಯ ಪಲಿತ ಮಗುವಾಗಿ ಅಂಕುರವಾಗಿತ್ತದೆ. ತನ್ನ ತಂಗಿಯ ಮದುವೆಯ ನಂತರ ಸುಜಾತಳನ್ನ ವರಿಸುವ ನಿರ್ದಾರದಲ್ಲಿದ್ದ ರಣಜಿತ್. ಅವಳ ಗರ್ಭದಲ್ಲಿದ್ದ ಮಗುವನ್ನು ತೆಗೆಸುವುದು ಉತ್ತಮ ಎಂದಾಗ ಸುಜಾತ ಕಟುವಾಗಿ ಅದನ್ನ ವಿರೋಧಿಸುತಾಳೆ. ತನ್ನ ತಂಗಿಯ ಮದುವೆ ಮುಗಿಸಿ ಬರಲು ಹೋಗಿದ್ದ ರಣಜಿತ್ ವಿಮಾನ ಅಪಘಾತದಲ್ಲಿ ಇಲ್ಲವಾದಾಗ, ಸುಜಾತಳ ಬದುಕಿನಲ್ಲಿ ಜನಿಸಿದ್ದ ಬೆಳಕು ಮತ್ತೆ ಮರೆಯಾಗುತ್ತದೆ. ತನ್ನ ಗರ್ಭದಲ್ಲಿರುವ ರಣಜಿತ್‌ನ ಅಂಶವನ್ನು ಬೆಳೆಸುವ ನಿರ್ಧಾರ ಮಾಡುತ್ತಾಳೆ. ಈ ಎಲ್ಲ ಬೆಳವಣಿಗೆ ಜೋತೆಗೆ ಗಂಡನಿಂದ ದೂರವಿದ್ದ ಹೆಣ್ಣು ಸಮಾಜದಿಂದ ಹಲವು ರೀತಿಯ ಹೀನ ಮಾತುಗಳಿಗೆ ತತ್ತಾಗಬೇಕಾಗುತ್ತದೆ. ಸ್ವ ಉದ್ಯೋಗಸ್ಥ ಹೆಣ್ಣು ಪರಪುರಷನೊಂದಿಗೆ ಓಡಾಡಿದರೆ ಅದಕ್ಕೆ ಸಂಬಂಧದ ಚಾಯೆ ಅವರಿಸುವುದು. ಈ ಸನ್ನಿವೇಶ ಗಂಡಿಗಾದರೆ ಅವನು ಹೆಣ್ಣು ಕೇಳಬೇಕಾದಷ್ಟು ಮಾತುಗಳನ್ನು ಕೇಳುವುದಿಲ್ಲ ಎಂಬ ನೋಟ ಸ್ತ್ರೀ ಜೀವನ ಸ್ವರೂಪವಾಗಿಬಿಟ್ಟಿದೆ.

ರಣಜಿತ್‌ನೊಂದಿಗೆ ಸುಜಾತ ಓಡಾಡುವಾಗ ಅವಳಿಗೆ ಈ ಅನುಭವವಾಗುತ್ತವೆ. ಗಂಡನ ಜೊತೆಯಲ್ಲಿ ಬದುಕದೆ ತನ್ನಗಾದ ನೋವಿನಿಂದ ಸ್ವಜೀವನವನ್ನು ನಡೆಸುವಾಗ ಹೆಣ್ಣು ಹೆಚ್ಚು ಅಲಮಕಾರ ಮಾಡಿದರೂ ಅದು ಸ್ವೇಚ್ಛೆಯಾಗಿ ನೋಡುವ ಸಾಮಾಜಿಕ ದೃಷ್ಟಿಕೋನ ಬದಲಾಗಬೇಕಿದೆ. ತನ್ನ ಎಲ್ಲ ಸಂಬಂಧಗಳನ್ನು ತೋರುವ ರೀತಿಯಲ್ಲಿ ನಡೆಸಿಕೊಂಡದರೆ ಅದು ಸ್ತ್ರೀ ಗಟ್ಟಿತನದ ಸಾಕ್ಷಿಯಾಗಿ ಉಳಿಯುವುದು ತೀರ ಕಡಿಮೆಯಾಗುತ್ತದೆ. ರಣಜಿತ್ ಸುಜಾತಾಳನ್ನು ಊಟಕ್ಕೆ ಕರೆದೋಯ್ಯಲು ಅವಳ ಆಫೀಸಿನ ಬಳಿಗೆ ಕಾರ್ ತಂದಾಗ ಅವಳ ಸಹ ಉದ್ಯೋಗಿಗಳು "ದೊಡ್ಡ ಕುಳಾನೇ ಹಿಡಿದಿದ್ದಾಳೆ ಕಣೋ", "ನೋಡೆ ಅವಳ ಧೈರ್ಯನಾ! ಕದ್ದು, ಮುಚ್ಚಿ ಮಾಡೋದ್ನ ರಾಜಾರೋಷವಾಗಿ ಮಾಡ್ತಾ ಇದ್ದಾಳೆ"[6]. ಈ ಹೇಳಿಕೆಗಳು ಒಂದು ಹೆಣ್ಣು ಗಂಡಿನೊಂದಿಗೆ ಇರುವಾಗ ವಹಿಸಬೇಕಾಗಿ ಹೇರಲ್ಪಟ್ಟಿರುವ ಸಾಮಾಜಿಕ ಶೋಷಣೆಗಳೇ ಆಗಿವೆ. ಇಲ್ಲಿ ಗಮನಿಸಬೇಕಿರುವ ಮತ್ತೊಂದು ಅಂಶವೆದರೆ ಹೆಣ್ಣು ಪರಪುರಷನೊಂದಿಗೆ ಸ್ನೇಹವಾಗಿ ನಿರ್ವಹಿಸುವಾಗ ಕದ್ದು ಮುಚ್ಚಿ ಸ್ನೇಹ ಮಾಡಬೇಕೆನ್ನುವ ಅಂಶ. ಇದು ಕೂಡ ಸಾಮಾಜಿಕ ಹೇರಿಕೆಯ ಅಂಶವಾಗಿದೆ.

"ಕುಟುಂಬದಲ್ಲಿನ ಶ್ರಮವಿಭಜನೆ ಗಂಡ ಹೆಂಡಿರ ಆಸ್ತಿಯ ಹಂಚಿಕೆಯನ್ನು ನಿರ್ಣಯಿಸಿತು, ಆ ಶ್ರಮವಿಭಜನೆಯಲ್ಲಿ ಈಗ ಬದಲಾವಣೆಯೇನೂ ಬರಲಿಲ್ಲ. ಆದರೆ ಇಂದು ಅದು ಕೌಟುಂಬಿಕ ಸಂಬಂಧಗಳನ್ನು ತಲೆಕೆಳಗು ಮಾಡಿದೆ. ಇದಕ್ಕೆ ಕಾರಣ ಕುಟುಂಬದ ಹೋರಗೆ ಶ್ರಮವಿಭಜನೆಯಲ್ಲಿ ಬಂದ ಬದಲವಣೆ. ಸ್ತ್ರೀ ಇಲ್ಲಿಯವರೆಗೆ ಮನೆಗೆಲಸದ ಜವಾಬ್ದಾರಿ ತೆಗೆದುಕೊಳ್ಳುತ್ತಿದ್ದಳು. ಅದೇ ಆಕೆಗೆ ಮನೆಯಲ್ಲಿ ಅಧಿಕಾರವಿರುವುದಕ್ಕೆ ಕಾರಣ ಆದರೆ ಈಗದು ಗಂಡಸಿನ ಅಧಿಕಾರಕ್ಕೆ ಕಾರಣವಾಗಿದೆ. ಪುರುಷನು ಜೀವನಾವಶ್ಯಕ ವಸ್ತುಗಳನ್ನು

AKSHARASURYA
ISSN: 2583-620X
Peer-Reviewed, Multi Lingual E-Journal
Volume – 02, Issue – 02, February 2023.

ಸಂಪಾದಿಸುವ ಕೆಲಸಕ್ಕೂ ಸ್ತ್ರೀ ವಹಿಸುವ ಗೃಹ ನಿರ್ವಹಣೆ ಜವಾಬ್ದಾರಿಗೂ ಹೋಲಿಕೆಯೇ ಇಲ್ಲ. ಮೊದಲನೆಯದು ಅತಿ ಮುಖ್ಯವಾದುದು. ಎರಡನೇಯದು ಅಷ್ಟೇನೂ ಮುಖ್ಯವಲ್ಲ"[7] ಎಂದು ಮಾರ್ಕ್ಸ್ ಮತ್ತು ಎಂಗೆಲ್ಸ್ ಗುರುತಿದರು. ಸ್ತ್ರೀ ನಿರ್ವಹಿಸುವ ಗೃಹ ಕಾರ್ಯಗಳು ಇಂದಿಗೂ ಗಣನೆಗೆ ಬಾರದೇಯೇ ಉಳಿದು ಬಿಡುತ್ತವೆ. ಸುಜಾತ ಶಿಕ್ಷಿತ ಹೆಣ್ಣು ತನ್ನ ಬದುಕನ್ನ ನೋಡುವ ರೀತಿಗೂ ಅವಳ ತಾಯಿ ಮತ್ತು ಅತ್ತೆಯಂದಿರು ಅವಳು ವಿಚ್ಛೇದನ ಪಡೆದ ನಂತರ ಅವಳನ್ನ ನೋಡುವ ರೀತಿಗಳಿಗು ಇರುವ ವ್ಯತ್ಯಾಸಗಳು ಕುಟುಂಬದಲ್ಲಿ ಶ್ರಮವಿಭಜನೆಯ ಆಧಾರದಲ್ಲಿ ಸಿದ್ಧಗೊಂಡಿರುವುದರ ಪರಿಣಾಮ. ಸುಜಾತಳಿಗೆ ಚುಚ್ಚುಮಾತುಗಳು ಬರುವುದು ಅವಳು ಕೌಟುಂಬಿಕ ಶ್ರಮದಿಂದ ಭಿನ್ನವಾಗಿ ತನ್ನ ಬದುಕನ್ನ ರೂಪಿಸಿಕೊಳ್ಳಲು ಆರಂಭಿಸಿದಾಗ.

ಭಾರತೀಯ ವಿವಾಹ ಸ್ವರೂಪ ಕಾದಂಬರಿಯಲ್ಲಿ ವಿಸ್ತೃತವಾಗುವುದು ಒನ್‌ವೇ ಟ್ರಾಫಿಕ್ ಮಾದರಿಯಲ್ಲಿ. ಇಲ್ಲಿ ಗಂಡ ಹೆಂಡತಿ ದೈಹಿಕವಾಗಿ ಒಟ್ಟಿಗಿದ್ದರೂ ಮಾನಸಿಕವಾಗಿ ತದ್ವಿರುದ್ಧ ಅನ್ನಿಸುತ್ತದೆ. ಸುಜಾತಳಿಗೆ ಬದುಕಿನ ಅನುಭವಗಳು ಗಂಡು ಹೆಣ್ಣಿನ ಸಂಬಂಧವನ್ನು ಅವಳಿಗೆ ತಿಳಿಸುದ ರೀತಿ ಹೀಗೆ, "ಗಂಡಸಿನ ದೃಷ್ಟಿಗೂ ಹೆಂಗಸಿನ ದೃಷ್ಟಿಗೂ ಅಂತರವಿದೆ. ಹೆಣ್ಣು ಗಂಡನ ಮನೆಗೆ ಕಾಲಿಟ್ಟ ಕೂಡಲೇ ಅದೇ ಅವಳದೊಂದು ಪ್ರಪಂಚವಾಗುತ್ತದೆ. ಅದನ್ನು ದಾಟಿ ಹೊರಬಂದು ಈಗಿನ ಕಾಲದಲ್ಲಿ ದುಡಿಯುತ್ತಿದ್ದರೂ, ಮನೆಯ ಪ್ರಪಂಚದ ಮೇಲೆ ಅವಳ ಕೇಂದ್ರ ದೃಷ್ಟಿ. ಗಂಡು ಹಾಗಲ್ಲ ಮನೆಯ ಪ್ರಪಂಚ ಅವನಿಗೆ ಸಂತೃಪ್ತಿ ತಂದರೆ ಹೊರಗಿನ ಪ್ರಪಂಚ ಅವನಾಡುವ ಮೈದಾನ. ಎರಡರಲ್ಲೂ ಒಂದೊಂದು ಕಾಲು ಇಟ್ಟಿರುತ್ತಾನೆ. ಹೊರ ಪ್ರಪಂಚ ಅವನ್ನನು ಕೈ ಚಾಚಿ ಕರೆದರೆ ಮನೆಯ ಪ್ರಪಂಚ ಅವನ್ನನು ಅಪ್ಪಿಕೊಳ್ಳುತ್ತದೆ"[8]. ಈ ಎರಡು ವಿಧದ ಸ್ವರೂಪಗಳನ್ನು ಕಂಡಿದ್ದು ಸುಜಾತಳು ಸ್ವಶಕ್ತವಾಗಿ ಬದುಕನ್ನು ಸಡೆಸಲು ಅವಳನ್ನ ಗಟ್ಟಿಗೊಳಿಸುತ್ತವೆ. ರಣಜಿತ್ ಮಗುವನ್ನು ತೆಗೆಸಿಬಿಡು ಎಂದಾಗ ಅಲ್ಲಿ ಒಂದು ಹೆಣ್ಣಿನ ಭಾನವೆಗಳಿಗೆ ಅವನದರೂ ಏನು ಬೆಲೆಯನ್ನು ಕೊಟ್ಟಂತಾಗುತ್ತದೆ ಎಂಬುದು ಪ್ರಶ್ನೆಯಾಗುತ್ತದೆ.

ಮಗುವನ್ನು ತೆಗೆಸುವ ಸಲುವಾಗಿ ಅವರಿಬ್ಬರ ಹೇಳಿಕೆಯಂತೆ ಕೂಡುವಿಕೆಯಾಗಿದ್ದರೆ ನಂಬಿಸಿ ಮೋಸಮಾಡುವ ಹುನ್ನಾರವಾಗಿಬಿಡುತ್ತದೆ. ಆದರೆ ಅದು ಒಪ್ಪಿತ ಕೂಡುವುಕೆಯಾಗಿತ್ತು ಅಲ್ಲಿ ಪ್ರೀತಿಯ ಸಿಂಚನ ಇಬ್ಬರಲ್ಲಿಯೂ ಇತ್ತು. ಯಶವಂತ್ ತಮ್ಮ ಹೆಂಡತಿಯನ್ನು ಮರಳಿ ಪಡೆಯುವ ಆಸೆಯಿಂದ ಬಂದಾಗ ಸುಜಾತ ರಣಜಿತ್ ನೋಮದಿಗಿನ ಸಂಬಂಧವನ್ನು ತಿಳಿಸುತ್ತಾಳೆ. ಇಷ್ಟದರೂ ಸಹ ಅವಳ ವಿಚ್ಛೇದನದ ನಿರ್ಧಾರ ಜಟಿಲವಾಗಿಯೇ ಉಳಿಯುತ್ತದೆ. ಸಹ ಅವಳಿಗೆ ಹೀಗೆ ತನ್ನ ಬದುಕಿನ ಎಲ್ಲ ಹಂತಗಳಲ್ಲಿಯೂ ಶೋಷಣೆಯನ್ನು ಅನುಭವಿಸಿದ ಸುಜಾತ ಬದುಕಿನಿಂದ ವಿಮುಖಳಾಗಿ ನಿಲ್ಲುವುದಿಲ್ಲ. ರಣಜಿತ್ ನಿರ್ವಹಿಸಬೇಕಿದ್ದ ಎಲ್ಲ ಕೆಲಸಗಳನ್ನು ಸುಜಾತ ನಿರ್ವಹಿಸಲು ಮುಂದಾಗಿತ್ತಾಳೆ.

ಸುಜಾತಳು ಇಷ್ಟು ಸ್ವಶಕ್ತವಾಗುದರ ಹಿಂದೆ ಶಿಕ್ಷಣ ಮತ್ತು ಆರ್ಥಿಕತೆಯ ಪಾತೆ ಪ್ರಮುಖವಾಗಿದೆ. ಒಂದು ವೇಳೆ ಅವಳು ಈ ಎರಡನ್ನು ಪಡೆಯಲು ಆಗದಿದ್ದರೆ ಅವಳ ಬದುಕು ಸಂಪ್ರದಾಯದ ನೆರಳಲ್ಲಿ ನಿಂತಾ ನೀರಾಗುತ್ತಿತ್ತು. ಹೆಣ್ಣು ತನ್ನ ವಿರುದ್ಧ ನಡೆಯುವ ಶೋಷಣೆಯನ್ನು ಸಮರ್ಥವಾಗಿ ಎದುರಿಸಲು ಶಿಕ್ಷಣದ ಅವಶ್ಯ. ಆರ್ಥಿಕವಾಗಿ ಸಬಲವಾದ ಹೆಣ್ಣು ಪ್ರಭುತ್ವ ಸಮಾಜದಲ್ಲಿ ತನ್ನ ಆಸೆಗಳಿಗೆ ತಕ್ಕಂತೆ ಬದುಕಬಹುದು. ಈ ಮೂಲಕ ಶೋಷಣೆಯನ್ನು ಕಳಚುವ ಮೂಲ ಮಂತ್ರಗಳಾಗಿ ಮಹಿಳಾ ಶಿಕ್ಷಣ ಮತ್ತು ಆರ್ಥಿಕತೆ ಕಾದಂಬರಿಯಲ್ಲಿ ವಿವರಿಲ್ಪಟ್ಟಿದೆ.

**ಕೊನೆ ಟಿಪ್ಪಣಿ:**

1. ಬೆ ಗೋ ರಮೇಶ್, ಸಾಹಿತ್ಯಲೋಕದ ಪ್ರಾತ:ಸ್ಮರಣಿಯರು ಉಷಾನವರತ್ನರಾಮ್, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು, 2005, ಪು, 14.
2. ಹೆಣ್ಣುಸಿರ ತಲ್ಲಣಗಳು, ರೂಪ ಹಾಸನ(ಸಂ), ಅಭಿರುಚಿ ಪ್ರಕಾಶನ, ಮೈಸೂರು, 2015, ಪು, 33.
3. ಅತಿಕ್ರಮಣ, ಉಷಾನವರತ್ನರಾಮ್, ಓಂ ಶಕ್ತಿ ಪ್ರಕಾಶನ, ಬೆಂಗಳೂರು,2016, ಪು,41
4. ಅದೇ, ಪು,44
5. ಮಹಿಳೆ ದುಡಿಮೆ ಮತ್ತು ಬಿಡುವು, ಡಾ. ಹೆಚ್ ಎಸ್ ಶ್ರೀಮತಿ(ಸಂ), ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007, ಪು, 47.
6. ಅತಿಕ್ರಮಣ, ಉಷಾನವರತ್ನರಾಮ್, ಓಂ ಶಕ್ತಿ ಪ್ರಕಾಶನ, ಬೆಂಗಳೂರು, 2016, ಪು, 113.
7. ನಮಗೆ ಗೋಡೆಗಳಿಲ್ಲ, ಬಿ.ಸುಜ್ಞಾನಮೂರ್ತಿ(ಅನು), ಲಡಾಯಿ ಪ್ರಕಾಶನ, ಗದಗ, 2017, ಪು, 48.
8. ಅತಿಕ್ರಮಣ, ಉಷಾನವರತ್ನರಾಮ್, ಓಂ ಶಕ್ತಿ ಪ್ರಕಾಶನ, ಬೆಂಗಳೂರು, 2016, ಪು, 134.

**ಗ್ರಂಥ ಋಣ.**

1. ಅತಿಕ್ರಮಣ, ಉಷಾನವರತ್ನರಾಮ್, ಓಂ ಶಕ್ತಿ ಪ್ರಕಾಶನ, ಬೆಂಗಳೂರು, 2016.
2. ನಮಗೆ ಗೋಡೆಗಳಿಲ್ಲ, ಬಿ.ಸುಜ್ಞಾನಮೂರ್ತಿ(ಅನು), ಲಡಾಯಿ ಪ್ರಕಾಶನ, ಗದಗ, 2017.
3. ಬೆ ಗೋ ರಮೇಶ್, ಸಾಹಿತ್ಯಲೋಕದ ಪ್ರಾತ:ಸ್ಮರಣಿಯರು ಉಷಾನವರತ್ನರಾಮ್, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು, 2005, ಪು, 14.
4. ಮಹಿಳೆ ದುಡಿಮೆ ಮತ್ತು ಬಿಡುವು, ಡಾ. ಹೆಚ್ ಎಸ್ ಶ್ರೀಮತಿ(ಸಂ), ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007, ಪು, 47.
5. ಮಹಿಳಾ ಅಸಮಾನತೆ, ನ್ಯಾ. ನಾಗಮೋಹನ ದಾಸ್, ಚಿಂತನ ಪುಸ್ತಕ ಪ್ರಕಾಶನ, ಬೆಂಗಳೂರು, 2015.
6. ಹೆಣ್ಣುಸಿರ ತಲ್ಲಣಗಳು, ರೂಪ ಹಾಸನ(ಸಂ), ಅಭಿರುಚಿ ಪ್ರಕಾಶನ, ಮೈಸೂರು, 2015.